ದಿನಾಂಕಃ 23.07.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಟಿ.ಎಂ. ವಕೀಲರಿಂದಃ**

ನಾನು ಬೇರೆಯವರಿಗೆ ಸೇರಿದ ಆಟೋವನ್ನು ಸವಾರಿ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಮದುವೆಗೆ ಮುಂಚಿತವಾಗಿಯೂ ಸಹ ಆಟೋ ಓಡಿಸುತ್ತಿದ್ದೆ ಎಂದರೆ ಸರಿ. ನನ್ನ ಮತ್ತು ಅರ್ಜಿದಾರರ ವಿವಾಹ ಕಾನೂನುಬದ್ಧವಲ್ಲ ಎಂದು ಯಾವುದೇ ದಾವೆ ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಸಕಲೇಶಪುರ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ. ಅರ್ಜಿದಾರರು ಪರಿಶಿಷ್ಟ ವರ್ಗಕ್ಕೆ ಸೇರಿರುವ ಕಾರಣ ಅವರನ್ನು ಮನೆ ತುಂಬಿಸಿಕೊಳ್ಳಲು ನನ್ನ ತಂದೆ ತಾಯಿ ಒಪ್ಪದ ಕಾರಣ ಅರ್ಜಿದಾರರನ್ನು ನಾನು ಬಿಟ್ಟುಹೋಗಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಜೀವನಾಂಶಕ್ಕಾಗಿ ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ ಎಂದರೆ ಅವರು ನನ್ನೊಂದಿಗೆ ಸಂಸಾರ ಮಾಡಿರುವುದಿಲ್ಲ. ಅರ್ಜಿದಾರರೊಂದಿಗೆ ಸಂಸಾರ ಮಾಡಲು ಪ್ರಯತ್ನಿಸಿದ್ದೀರ ಎಂದರೆ ಪ್ರಯತ್ನಿಸಿರುತ್ತೇನೆ.

ಅರ್ಜಿದಾರರು ಅಂಗವಿಕಲರು ಎಂದರೆ ಸರಿ. ಆದ ಕಾರಣ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕಾಫಿ ತೋಟ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಹೆಸರಿನಲ್ಲಿರುತ್ತದೆ. ನಾನು ಈಗಲೂ ಸಹ ಜಮೀನಿನಲ್ಲಿ ವ್ಯವಸಾಯ ಮಾಡಿ ಆಟೋ ಓಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಜೀವನಾಂಶ ನೀಡಲು ನಾನು

ಸಮರ್ಥನಿದ್ದೇನೆ ಎಂದರೆ ಆಟೋ ಓಡಿಸುತ್ತಿರುವುದರಿಂದ ದಿನಕ್ಕೆ 200 ರೂ. ಮತ್ತು ಪೌರೋಹಿತದಿಂದ ದಿನಕ್ಕೆ 100 ರೂ. ಆದಾಯ ಬರುತ್ತದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.